

**ಎಡದಿಂದ ಬಲಕ್ಕೆ**

| | |
|---|---|
| 1. ಅದ್ಭುತವೆನಿಸುವ ಕಾವ್ಯ ವಾಚನವನ್ನು ಕೇಳಿ ಮಾತೇ ಇಲ್ಲವಾಯಿತು | 4 |
| 3. ಅಧ್ವರ್ಯುವನ್ನು ಕಂಡೊಡನೆ ಏಕಿಂಥ ನಡುಕ? | 3 |
| 4. ವಾಣಿಜ್ಯದ ಅಧ್ಯಯನಕ್ಕೆ ತೊಡಗಿ ವರ್ತಕನೇ ಆದ | 3 |
| 6. ವೈಮನಸ್ಯಕ್ಕೆ ಕಾರಣವಾಗಿದ್ದ ವಸ್ತುಗಳ ಅದಲಾಬದಲಿ | 4 |
| 7. ಪವಿತ್ರ ಪೀಠದ ಮೇಲೆ ಬೌದ್ಧರ ಮೂರು ಪವಿತ್ರ ಗ್ರಂಥಗಳು | 4 |
| 9. ಕಲಾಮಯವೇನಲ್ಲ ಬಿಡಿ ; ಅದು ಮೃತ್ಯುದೇವತೆಯ ಮನೆ | 4 |
| 12. ಭಾರೀ ಸದ್ದು ಮಾಡಿ ಅಪಾಯ ತಪ್ಪಿಸಲು ಒಳ್ಳೆಯ ತಂತ್ರ | 4 |
| 14. ಗೋವಿಂದನ ಪೂಜಾಕ್ರಮವೇ ಹಿಂದುಮುಂದು! | 3 |
| 15. ಕಲಿಸುವ ಕೆಲಸವೇ ಆಕೆಗೆ ಎಲ್ಲವೂ | 3 |
| 16. ದಂಪತಿಗಳ ಸೇನೆಗೆ ಆತನೇ ಮುಖ್ಯಸ್ಥ | 4 |

**ಮೇಲಿನಿಂದ ಕೆಳಕ್ಕೆ**

| | |
|---|---|
| 1. ನೀರು ಪಡೆಯಲು ರುಪಾಯಿ ನೀಡದೆ ಅಲ್ಲಿ ಬೇರೆ ಮಾರ್ಗವೇ ಇಲ್ಲ | 4 |
| 2. ತಾವರೆಯನ್ನು ತಂದು ಒಂಬತ್ತು ದಿನಗಳ ಹಬ್ಬ | 4 |
| 3. ಅವನಿಗೂ, ಇವನಿಗೂ, ಎಲ್ಲರಿಗೂ ಇರುವುದೊಂದೇ ಭೂಮಿ | 3 |
| 5. ಕುಳ್ಳರ ಓಡಾಟದ ನಡುವೆಯೇ ಕದ್ದು ಮುಚ್ಚಿ ಕೆಲಸ | 3 |
| 6. ಮಾಯಾ ವೇಷದಲ್ಲಿ ಎಲ್ಲೆಲ್ಲೂ ಪ್ರಾಣ ತೆಗೆವ ವಸ್ತು | 4 |
| 8. ಆ ಮನೆಯ ಕೆಲಸವೆಲ್ಲ ತುಂಬ ಮನೋಹರ | 4 |
| 10. ಮೂರು ದಿನ ನಡೆದದ್ದೆಲ್ಲ ಬರೀ ಕೊಲ್ಲುವ ಕೆಲಸ | 3 |
| 11. ಕಾವ್ಯ ರಚಿಸಿದವರಲ್ಲೊಬ್ಬ ಲಲಿತ ವಿದ್ಯೆ ಬಲ್ಲವ ಕೂಡ | 4 |
| 12. ಸಂಸಾರದ ತಿರುವಿನಲ್ಲಿ ಕಂಡದ್ದು ವಿದ್ಯಾಧಿದೇವತೆಯೇ? | 4 |
| 13. ಫಲಿತಾಂಶ ತಿಳಿದೊಡನೆ ನೆಲದಾಳದ ಲೋಕ ಸೇರಿದ | 3 |

## 16–3–2023 ಉತ್ತರಗಳು

**ಎಡದಿಂದ ಬಲಕ್ಕೆ**

1. ಅಭಿಧಾನ 3. ಸಂಹಾರ 4. ವಸತಿ 6. ಚುನಾವಣೆ 7. ಆಸವ 9. ಹಾವುಗೆ 11. ತೆಪರ 13. ಕರಾವು 15. ವ್ಯಾಸಮುನಿ 17. ಧಿಮಾಕು 18. ರಿಷಭ 19. ಲಗುಬಗೆ

**ಮೇಲಿನಿಂದ ಕೆಳಕ್ಕೆ**

1. ಅರಚು 2, ನವಣೆ 3. ಸಂತಸ 5. ತಿಳಿವು 7. ಆದ್ಯತೆ 8. ವತ್ಸರ 9. ಹಾರ್ದಿಕ 10. ಗೆಲುವು 12. ಪರಿಧಿ 14. ರಾಸಭ 15. ವ್ಯಾಕುಲ 16. ನಿರಿಗೆ

ಪ್ರಶ್ನಾಂಕಣ

# ಸಾಗರ ಸಂರಕ್ಷಣೆಗೆ ಹೊಸ ಒಪ್ಪಂದ ಏನು?

ಧರೆಯ ಸಾಗರ ಸಾಮ್ರಾಜ್ಯ ಮತ್ತು ಸಾಗರ ಜೀವಜಾಲ ಸಂರಕ್ಷಣೆಯನ್ನು ಕುರಿತು ವಿಶ್ವಸಂಸ್ಥೆಯಲ್ಲಿ (ಯುನೈಟೆಡ್ ನೇಷನ್ಸ್) ಕಳೆದ ಹತ್ತು ವರ್ಷಗಳಿಂದ ನಡೆಯುತ್ತಿದ್ದ ಜಾಗತಿಕ ಮಟ್ಟದ ಒಂದು ಗಂಭೀರ ಸಮಾಲೋಚನೆ ಕೆಲವೇ ದಿನಗಳ ಹಿಂದೆ (04 ಮಾರ್ಚ್ 2023) ಒಂದು ಸರ್ವ ಸದಸ್ಯ ಸ್ವೀಕೃತ ಒಪ್ಪಂದದೊಡನೆ ಮುಕ್ತಾಯಗೊಂಡಿದೆ. 'ದಿ ಯುನೈಟೆಡ್ ನೇಷನ್ಸ್ ಹೈ ಸೀಸ್ ಟ್ರೀಟಿ' ಎಂಬ ಈ ಅಂತರರಾಷ್ಟ್ರೀಯ ಒಪ್ಪಂದ ಇಸವಿ 2030ರ ವೇಳೆಗೆ ಮುಕ್ತ ಸಾಗರ ಪ್ರದೇಶದ ಒಟ್ಟು ಶೇ. 30ರಷ್ಟು ವಿಸ್ತಾರದ ನಿರ್ದಿಷ್ಟ ಪ್ರದೇಶಗಳನ್ನು ಸಂಪೂರ್ಣ ಸಂರಕ್ಷಣೆಗೆ ಮೀಸಲಿಡುವ ತೀರ್ಮಾನಕ್ಕೆ ಬಂದಿದೆ.

ಇಳೆಯ ಗೆಳೆಯರಿಗೆಲ್ಲ ಇದು ಅತೀವ ಸಂತಸ ತಂದಿರುವ ನಿರ್ಣಯವಾಗಿದೆ. ಇಸವಿ 1982ರ ನಂತರ, ಎಂದರೆ 40 ವರ್ಷಗಳ ನಂತರ, ವಿಶ್ವಸಂಸ್ಥೆಯ ಎಲ್ಲ ಸದಸ್ಯ ರಾಷ್ಟ್ರಗಳು ಸಾಗರ ಸಂರಕ್ಷಣೆಯನ್ನು ಕುರಿತಂತೆ ಕೈಗೊಂಡ ಒಮ್ಮತದ, ತುಂಬ ಮಹತ್ವದ, ಪ್ರಶಂಸಾರ್ಹವೂ ಆದ ಒಪ್ಪಂದ ಇದು ಎಂಬುದು ಇಲ್ಲಿ ಗಮನಿಸಬೇಕಾದ ಅಂಶ.

ನಿಮಗೇ ತಿಳಿದಿರುವಂತೆ ಧರೆಯ ಸಾಗರಾವಾರ ಅಪಾರ ಜೀವಿ ಭಂಡಾರ ಮತ್ತು ನಾನಾ ನೈಸರ್ಗಿಕ ಸಂಪನ್ಮೂಲಗಳ ಆಗರ ಕೂಡ. ಕಡಲಿನಾವಾರದಲ್ಲಿ ಈವರೆಗೆ ಗುರುತಿಸಿ ಹೆಸರಿಸಲಾಗಿರುವ ಜೀವಿ ಪ್ರಭೇದಗಳ ಸಂಖ್ಯೆ 2,30,000! ಇನ್ನೂ ಅಜ್ಞಾತವಾಗಿರುವ ಪ್ರಭೇದಗಳೇ ಬಹಳ ಹೆಚ್ಚಿದ್ದು ಸಾಗರ ಸಾಮ್ರಾಜ್ಯದಲ್ಲಿ ಒಟ್ಟಾರೆ ಕನಿಷ್ಠ ಎರಡು ದಶಲಕ್ಷ ಜೀವಿ ಪ್ರಭೇದಗಳು ನೆಲೆಗೊಂಡಿವೆ ಎಂದು ತಜ್ಞರು ಅಂದಾಜಿಸಿದ್ದಾರೆ!

ವಿಪರ್ಯಾಸ ಏನೆಂದರೆ, ಬಹುಪಾಲು ಸಾಗರ ಜೀವಿಗಳು ಮುಕ್ತ ಕಡಲಿನ ಪ್ರದೇಶಗಳಲ್ಲೇ ನೆಲೆಗೊಂಡಿವೆ. ಕಡಲ ತೀರವನ್ನು ಹೊಂದಿರುವ ರಾಷ್ಟ್ರಗಳ ನೆಲದ ಅಂಚಿನಿಂದ 12 ನಾಟಿಕಲ್ ಮೈಲಿಗಳ (=22.2 ಕಿ.ಮೀ.) ದೂರದವರೆಗಿನ ಸಾಗರ ಭಾಗ ಆಯಾ ರಾಷ್ಟ್ರದ್ದೇ ಆಸ್ತಿಯಾಗಿದ್ದು ಅದರಾಚಿನ ಸಾಗರ ಪ್ರದೇಶವನ್ನು ಮುಕ್ತ ಸಾಗರ (ಹೈ ಸೀ ಅಥವಾ ಲ್ಯಾಟಿನ್ ಭಾಷೆಯ ಮೆರೆ ಲಿಬೆರಂ) ಎಂದು ಗುರುತಿಸಲಾಗಿದೆ. ಕಡಲುಗಳ ಒಟ್ಟೂ ವೈಶಾಲ್ಯದ (=361 ದಶಲಕ್ಷ ಚದರ ಕಿ.ಮೀ.) ಮೂರರ ಎರಡರಷ್ಟು ವಿಸ್ತಾರವನ್ನು ಆವರಿಸಿರುವ ಈ ಮುಕ್ತ ಸಾಗರ ಪ್ರದೇಶದಲ್ಲಿ ಯಾವುದೇ ರಾಷ್ಟ್ರ ಬೇಕಾದರೂ ಯಾವುದೇ ವಾಣಿಜ್ಯ (ಮೀನುಗಾರಿಕೆ, ಗಣಿಗಾರಿಕೆ, ನೌಕಾಯಾನ ಇತ್ಯಾದಿ), ಮಿಲಿಟರಿ ಮತ್ತು ಸಂಶೋಧನಾ ಚಟುವಟಿಕೆಗಳನ್ನು ನಡೆಸಬಹುದಾಗಿದೆ. ಹಾಗಾಗಿ ಪ್ರಸ್ತುತ ಈ ಪ್ರದೇಶದ ಸರ್ವ ವಿಧ ಜೀವಿಗಳೂ (ಅಂಥ ಕೆಲ ಜೀವಿಗಳು ಚಿತ್ರಗಳಲ್ಲಿವೆ) ತೀವ್ರ ಅಪಾಯದ ಸ್ಥಿತಿಯಲ್ಲಿವೆ. ಉದಾಹರಣೆಗೆ ವಿಶ್ವ ಪ್ರತಿಷ್ಠಿತ ಐ.ಯು.ಸಿ.ಎನ್ (International Union For the Conservation of Nature) ಸಂಸ್ಥೆಯ ಇತ್ತೀಚಿನ ಸರ್ವೇಕ್ಷಣೆಯ ಪ್ರಕಾರ ಶೇ.15ರಷ್ಟು ಹವಳ ಪ್ರಭೇದಗಳು, ಶೇ.11 ರಷ್ಟು ಮೃದ್ವಂಗಿಗಳು, ಶೇ.67ರಷ್ಟು ಮತ್ಸ್ಯ ಪ್ರಭೇದಗಳು ಮತ್ತು ಶೇ.90ರಷ್ಟು ಶಾರ್ಕ್ ವಿಧಗಳು ಅಳಿದು ಹೋಗುವ ಸ್ಥಿತಿ ತಲುಪಿವೆ! ಆದ್ದರಿಂದಲೇ ಎಲ್ಲ ಸಾಗರ ಜೀವಿಗಳನ್ನೂ, ಸಾಗರ ಪರಿಸರವನ್ನೂ, ಸಾಗರ ಸಂಪನ್ಮೂಲಗಳನ್ನೂ ರಕ್ಷಿಸಲೆಂದು ಈ ಒಪ್ಪಂದ.



■ ಎನ್. ವಾಸುದೇವ್